**ಕರ್ನಾಟಕ ವಿದ್ಯುತ್ ನಿಗಮ ನಿಯಮಿತ**

(ಕರ್ನಾಟಕ ಸರ್ಕಾರಿ ಸ್ವಾಮ್ಯದ ಉದ್ದಿಮೆ)

**ಕಾಳಿ ನದಿ ಜಲ ವಿದ್ಯುತ್ ಯೋಜನೆ**

**ಸಂಖ್ಯೆ : ಡಿ2 ಡಬ್ಲ್ಯೂ/30/2009-10**

**ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ**
**ರಸ್ತೆ ಮತ್ತು ಕಟ್ಟಡ ವಿಭಾಗ, ಕ. ವಿ. ನಿ. ನಿ.**
**ಅಂಬಿಕಾನಗರ – 581 363**

**ದಿನಾಂಕ : 10.02.2010**

**<u>ಟೆಂಡರ್ ಪ್ರಕಟಣೆ</u>**

**ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ನೋಂದಣಿ ಮಾಡಿಸಿರುವ 3 ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಕೆಳಕಂಡ ಕೆಲಸಕ್ಕೆ ಕೆಲಸದ ಹೆಸರಿನ ಮೇಲ್ಬರಹ ಬರೆದಿರುವ, ಮೊಹರು ಮಾಡಿದ ಪ್ರತ್ಯೇಕ ಐಟಂವಾರು ಟೆಂಡರ್ ದ್ವಿಪ್ರತಿಗಳಲ್ಲಿ ಕರೆಯಲಾಗಿದೆ.**

| ಅ. ನಂ | ಕೆಲಸದ ಹೆಸರು | ಅಂದಾಜು ಮೊತ್ತ [ರೂಪಾಯಿಗಳಲ್ಲಿ] | ಠೇವಣಿ ಹಣ [ರೂಪಾಯಿಗಳಲ್ಲಿ] 2½% ದಂತೆ | ಖಾಲಿ ಟೆಂಡರ– ಬೆಲೆ ಮೌಲ್ಯ ವರ್ಧಿತ ತೆರಿಗೆ ಸೇರಿ (ಹಿಂದಿರುಗಿಸ– ಲಾಗುವುದಿಲ್ಲ) | ಗುತ್ತಿಗೆ ಕಾಲಾವಧಿ |
|---|---|---|---|---|---|
| 1 | ಡಾ// ಅಂಬೇಡ್ಕರ ಭವನದಲ್ಲಿಯ ಕೊಠಡಿಯಲ್ಲಿ ಶೌಚಾಲಯ ನಿರ್ಮಿಸುವುದು ಮತ್ತು ಊಟದ ಕೊಠಡಿಯಲ್ಲಿ ಆಸನಗಳ ವ್ಯವಸ್ಥೆ ಮಾಡುವ ಕುರಿತು. | 7,12,000/- | 17,800/- | ರೂ. 260/- | 4 ತಿಂಗಳು [ಮಳೆಗಾಲ ಹೊರತು ಪಡಿಸಿ] |

೧) ಖಾಲಿ ಟೆಂಡರಗಳಿಗಾಗಿ ಅರ್ಜಿ ಮತ್ತು ಖಾಲಿ ಟೆಂಡರ ನಮೂನೆ ಬೆಲೆ ಸ್ವೀಕರಿಸಲು ಕೊನೆಯ ದಿ: **24.02.2010**

೨) ಖಾಲಿ ಟೆಂಡರ ಫಾರ್ಮ್‌ಗಳನ್ನು ಕೊಡುವ ದಿನಾಂಕ ಕಛೇರಿ ಸಮಯದಲ್ಲಿ. : **04.03.2010**

೩) ಭರ್ತಿ ಮಾಡಿದ ಟೆಂಡರ ಫಾರ್ಮ್‌ಗಳನ್ನು ಸ್ವೀಕರಿಸುವ ದಿನಾಂಕ ಸಂಜೆ 4.00 ಘಂಟೆಯವರೆಗೆ. : **09.03.2010**

೪) ಭರ್ತಿ ಮಾಡಿದ ಟೆಂಡರ ಫಾರ್ಮ್‌ಗಳನ್ನು ಸಾಧ್ಯವಿದ್ದಲ್ಲಿ ಅದೇ ದಿನ ಸಂಜೆ 4.30 ಘಂಟೆಗೆ ಲಭ್ಯವಿರುವ ಗುತ್ತಿಗೆದಾರರು ಅಥವಾ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು.

೫) ಟೆಂಡರ್ ಪತ್ರಗಳನ್ನು ಅಂಚೆ ಮೂಲಕ ಕಳುಹಿಸಲಾಗುವುದಿಲ್ಲ/ಸ್ವೀಕರಿಸಲಾಗುವುದಿಲ್ಲ.

೬) ಭರ್ತಿ ಮಾಡಿದ ಟೆಂಡರ ಫಾರ್ಮ್‌ಗಳೊಂದಿಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ನೀಡಿದ ಹಾಗೂ ಡೆಪ್ಯೂಟಿ ಜನರಲ್ ಮ್ಯಾನೇಜರ್ (ಫೈನಾನ್ಸ್) ಕೆ–1 ಕೆ.ಪಿ.ಸಿ.ಎಲ್. ಅಂಬಿಕಾನಗರ ಇವರ ಪರವಾಗಿ ಅಡವು ಮಾಡಿದ 180 ದಿನಗಳ ಸಿಂಧುತ್ವವುಳ್ಳ ಸಿಡಿಆರ್/ಎಫ್‌ಡಿಆರ್/ಟಿಡಿಆರ್ ರೂಪದ ಮೇಲ್ಕಾಣಿಸಿದ ಮೊತ್ತದ ಠೇವಣಿ(ಇ.ಎಂ.ಡಿ) ಲಗತ್ತಿಸಿರಬೇಕು. ಇ.ಎಂ.ಡಿ. ಒಳಗೊಂಡಿರದ ಟೆಂಡರುಗಳನ್ನು ತಿರಸ್ಕರಿಸಲಾಗುವುದು. ಯಾವುದೇ ದರ್ಜೆಯ ಗುತ್ತಿಗೆದಾರರಿಗೆ ಇ.ಎಂ.ಡಿ. ವಿನಾಯಿತಿ ಇರುವುದಿಲ್ಲ.

೭) ವಿವಾದವನ್ನು ಮಧ್ಯಸ್ಥಿಕೆಯಿಂದ ಪರಿಹರಿಸಿಕೊಳ್ಳುವ ಶರತ್ತುಗಳನ್ನು ಹೊಂದಿದ ಟೆಂಡರುಗಳನ್ನು ಪರಿಗಣಿಸಲಾಗುವುದಿಲ್ಲ.

೮) ಗುತ್ತಿಗೆದಾರರು ನಮೂದಿಸುವ ದರಗಳು ಸಿಮೆಂಟ್, ಉಕ್ಕು(ಸ್ಟೀಲ್), ಇತರೇ ಸಾಮಗ್ರಿಗಳ ಬೆಲೆಗಳನ್ನೊಳಗೊಂಡಿರಬೇಕು ಹಾಗೂ ಕಾಮಗಾರಿಗೆ ಬೇಕಾಗುವ ಸಿಮೆಂಟ್, ಉಕ್ಕು(ಸ್ಟೀಲ್) ಹಾಗೂ ಎಲ್ಲ ಸರಕು ಸಾಮಗ್ರಿಗಳನ್ನು ಗುತ್ತಿಗೆದಾರರೇ ತರಬೇಕು.

೯) ಗುತ್ತಿಗೆದಾರರು ಅಗತ್ಯಗಾದ ಪ್ರಮಾಣದಷ್ಟು ಒಳ್ಳೇಯ ಗುಣಮಟ್ಟದ ಮರಳು/ಜಲ್ಲಿ/ಮಣ್ಣು/ಕಲ್ಲು ಇತ್ಯಾದಿಗಳನ್ನು ತಾವೇ ವ್ಯವಸ್ಥೆಮಾಡಿಕೊಳ್ಳಬೇಕು. ಗಣಿಗಾರಿಕೆ ಅಗತ್ಯವಾದ ಪರವಾನಿಗೆ/ಭೋಗ್ಯಕ್ಕೆ ಪಡೆದುಕೊಳ್ಳುವುದು ಇತ್ಯಾದಿಗಳನ್ನು ಸಂಬಂಧಿತ ಇಲಾಖೆಗಳಿಂದ ಗುತ್ತಿಗೆದಾರರೆ ವ್ಯವಸ್ಥೆಮಾಡಿಕೊಳ್ಳಬೇಕು. ಮತ್ತು ದೂರದ ವ್ಯತ್ಯಾಸದಿಂದಾಗುವ ಹೆಚ್ಚುವರಿ ಸಾಗಾಣಿಕೆ ವೆಚ್ಚಗಳನ್ನು ಕೊಡಲಾಗುವುದಿಲ್ಲ.

೧೦) ಯಾವುದೇ ಕಾರಣ ನೀಡದೇ ಯಾವುದೇ ಅಥವಾ ಎಲ್ಲಾ ಟೆಂಡರಗಳನ್ನು ತಿರಸ್ಕರಿಸುವ ಹಾಗೂ ಯಾವುದೇ ಟೆಂಡರನ್ನು ಅಂಗೀಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.

೧೧) ಗುತ್ತಿಗೆದಾರರು ಅರ್ಜಿ ಸಲ್ಲಿಸುವಾಗ ತಮ್ಮ ಸ್ವಂತ ಅಥವಾ ಸಂಸ್ಥೆಯ ಹೆಸರಿನಲ್ಲಿ ಸ್ವತಂತ್ರ ಪಿ. ಎಫ್. ಕೋಡ್ ನಂಬರನ್ನು ಆದಾಯಕರ ಪಾನ ನಂಬರನ್ನು ಹಾಗೂ ಕಾರ್ಮಿಕರ ಭವಿಷ್ಯನಿಧಿ ಇಲಾಖೆಯಿಂದ ಪಡೆದ ಬಗ್ಗೆ ದಾಖಲೆ ಹಾಜರು ಪಡಿಸಬೇಕು. ಸೇವಾ ಶುಲ್ಕ ದಾಖಲೆ **[service tax certificate]** ಇಲ್ಲದಿದ್ದಲ್ಲಿ ಅವರಿಗೆ ಖಾಲಿ ಟೆಂಡರ್ ಫಾರ್ಮಗಳನ್ನು ವಿತರಿಸಲಾಗುವುದಿಲ್ಲ. ಯಾವುದೇ ಕಾರಣಕ್ಕೂ ಯಶಸ್ವಿ ಗುತ್ತಿಗೆದಾರರು, ಪಿ.ಎಫ್. ವಂತಿಗೆಯನ್ನು ಕೆ.ಪಿ.ಸಿ. ಲೆಖ್ಖಕ್ಕೆ ಸಂದಾಯ ಮಾಡಬಾರದು. ಯಶಸ್ವಿ ಗುತ್ತಿಗೆದಾರರು, ಅವರ ಕೆಲಸಗಾರರನ್ನು ಪಿ.ಎಫ್. ಕಾಯ್ದೆಗೆ ಒಳಪಟ್ಟಿರುವ ಬಗ್ಗೆ ಮುಚ್ಚಳಿಕೆ ಕೊಡಬೇಕು ಮತ್ತು ಪಿ.ಎಫ್. ಕಟ್ಟಿದ ಬಗ್ಗೆ ಚಲನ್ ನಂ. **2, 5, 10** ಮತ್ತು **12**ಎ ಹಾಜರಪಡಿಸಬೇಕು ಹಾಗೂ ಅಗತ್ಯವಿರುವ ಕಾರ್ಮಿಕ ಇಲಾಖೆಯಿಂದ ಪಡೆದ ಪರವಾನಗಿ ಪತ್ರವನ್ನು ಹಾಗೂ ಮಾರಾಟ ತೇರಿಗೆ ಸಲ್ಲಿಸಿ ಬೇ-ಬಾಕಿ, ವ್ಯಾಟ್ [VAT] ಧೃಡೀಕರಣ ಪತ್ರವನ್ನು ಹಾಜರಪಡಿಸಬೇಕು.

೧೨) ಗುತ್ತಿಗೆದಾರರ ಕಾಮಗಾರಿಯ ಬಿಲ್ಲಿನಲ್ಲಿ ಒಟ್ಟೂ ಮೊತ್ತದ ಶೇಕಡಾ ೧ ರಂತೆ ಕಾರ್ಮಿಕ ಯೋಗ ಕ್ಷೇಮ ತೆರಿಗೆಯನ್ನು ಕಡಿತಗೊಳಿಸಲಾಗುವುದು.

೧೩) ಗುತ್ತಿಗೆದಾರರು ಕಾಮಗಾರಿಯ ಸೇವಾ ಶುಲ್ಕವನ್ನು ಭರಿಸಲು ಕೇಂದ್ರಿಯ ಶುಲ್ಕ ಕಚೇರಿಯಲ್ಲಿ ತಮ್ಮ ಹೆಸರನ್ನು ಸ್ವತಃ ನೊಂದಾಯಿಸತಕ್ಕದ್ದು ಮತ್ತು ಗುತ್ತಿಗೆದಾರರು ತಮ್ಮ ದರಗಳನ್ನು ಸೇವಾ ಶುಲ್ಕ ಮತ್ತು ಅದರ ಮೇಲಿನ ತೆರಿಗೆ ಹೊರತುಪಡಿಸಿ ನಮೂದಿಸಬೇಕು, ಆದರೆ "ಸೇವಾ ಶುಲ್ಕ ಮತ್ತು ಅದರ ಮೇಲಿನ ತೆರಿಗೆ ಪ್ರತ್ಯೇಕ" ಎಂದು ಶೆಡ್ಯೂಲ್ -ಬಿ ಕೊನೆಯಲ್ಲಿ ನಮೂದಿಸಬೇಕು. ಮೇಲ್ಕಾಣಿಸಿದ ಶುಲ್ಕವನ್ನು ಗುತ್ತಿಗೆದಾರರ ಬಿಲ್ಲಿನಿಂದ ಕಡಿತಗೊಳಿಸಿ ಸಂಬಂಧಪಟ್ಟ ಇಲಾಖೆಗೆ ಸಂದಾಯ ಮಾಡಲಾಗುವುದು, ಗುತ್ತಿಗೆದಾರರು ಸೇವಾ ಶುಲ್ಕದ ಮರು ಪಾವತಿಯನ್ನು ಸಂಬಂಧ ಪಟ್ಟ ಇಲಾಖೆಯಿಂದ ಪಡೆಯತಕ್ಕದ್ದು.

೧೪) ಕೇಂದ್ರ/ರಾಜ್ಯದ/ಸ್ಥಳಿಯ ಸರಕಾರಗಳ ಯಾವುದೇ ತೆರಿಗೆಗಳು ಗುತ್ತಿಗೆದಾರರೇ ಭರಿಸತಕ್ಕದ್ದು.

೧೫) ಖಾಲಿ ಟೆಂಡರ ಫಾರ್ಮ್‌ಗಳನ್ನು ಖರೀದಿಸಿದ ಗುತ್ತಿಗೆದಾರರು ಒಂದು ವರ್ಷದಲ್ಲಿ ಸತತವಾಗಿ ಎರಡು ಬಾರಿ ಭರ್ತಿ ಮಾಡಿ ಟೆಂಡರ ಹಾಕದೇ ಇರುವವರನ್ನು ನಿಗಮದಲ್ಲಿ ಮುಂದಿನ ಆರು(೬) ತಿಂಗಳುಗಳವರೆಗೆ ಟೆಂಡರ ಹಾಕಲು ನಿರ್ಬಂಧಿಸಲಾಗುವುದು. ಮುಂದುವರಿದಂತೆ, ಈ ರೀತಿ ೨ ಬಾರಿ ನಿರ್ಬಂಧಿಸಿದವರ ಗುತ್ತಿಗೆ ನೋಂದಣಿಯನ್ನು ರದ್ದು ಪಡಿಸಲಾಗುವುದು.

೧೬) 10 ವರ್ಷಗಳಿಂದೀಚೆ ನಿಗಮದಲ್ಲಿ ಅಥವಾ ಎಲ್ಲಾದರು ತೆಗೆದು ಹಾಕಲ್ಪಟ್ಟ/ಮುಕ್ತಾಯದ ಮೊದಲೇ ಕಾಮಗಾರಿ ನಿಲ್ಲಿಸಿದ ಗುತ್ತಿಗೆದಾರರಿಗೆ/ಸಂಸ್ಥೆಗಳಿಗೆ ಖಾಲಿ ಟೆಂಡರ ಫಾರ್ಮ್‌ಗಳನ್ನು ನೀಡಲಾಗುವುದಿಲ್ಲ.

೧೭) ನಿಗಮದಿಂದ ಕೊಡಮಾಡಿದ ಶೆಡ್ಯೂಲ್-ಎ ಮತ್ತು ನಾನ್ ಶೆಡ್ಯೂಲ್-ಎ ವಸ್ತುಗಳಿಗೆ ಆಯಾ ಸಮಯದಲ್ಲಿ ಆಕರಿಸುವ ಸೇಲ್ಸ್ ಟ್ಯಾಕ್ಸನ್ನು ಗುತ್ತಿಗೆದಾರರು ಭರಿಸಬೇಕಾಗುವುದು.

೧೮) ಖಾಲಿ ಟೆಂಡರ ಫಾರ್ಮ್‌ಗಳಿಗೆ ಅರ್ಜಿ ಸಲ್ಲಿಸುವ ಗುತ್ತಿಗೆದಾರರು ತಮ್ಮ ಗುತ್ತಿಗೆ ನೋಂದಣಿ ಪ್ರತಿಯನ್ನು ಅರ್ಜಿ ಜೊತೆ ಲಗತ್ತಿಸಬೇಕು.

೧೯) ಖಾಲಿ ಟೆಂಡರಗಳಿಗಾಗಿ ಅರ್ಜಿ ಸಲ್ಲಿಸುವಾಗ ಹಾಗೂ ಭರ್ತಿ ಮಾಡಿದ ಟೆಂಡರುಗಳನ್ನು ಹಾಕುವಾಗ ಗುತ್ತಿಗೆದಾರರಿಗೆ ನೀಡಿದ ಪಾಸ್‌ಬುಕ್/ಲಾಗ್‌ಬುಕ್‌ಗಳಲ್ಲಿ ಅವಶ್ಯಕವಾದ ಮಾಹಿತಿಗಳನ್ನು ತುಂಬಲು ಟೆಂಡರು ನೀಡುವ/ಸ್ವೀಕರಿಸುವ ಅಧಿಕಾರಿಗಳಿಗೆ ಹಾಜರ್ ಪಡಿಸತಕ್ಕದ್ದು.

೨೦) ಪಾಸ್‌ಬುಕ್/ಲಾಗ್‌ಬುಕ್‌ಗಳಿಲ್ಲದೇ ಖಾಲಿ ಟೆಂಡರ್ ಫಾರ್ಮಗಳನ್ನು ನೀಡಲಾಗುವುದಿಲ್ಲ ಹಾಗೂ ಇದೇ ರೀತಿ ಭರ್ತಿ ಮಾಡಿದ ಟೆಂಡರುಗಳನ್ನು ಸ್ವೀಕರಿಸಲಾಗುವುದಿಲ್ಲ.

೨೧) ನಮೂನೆ ಬಿ ದಲ್ಲಿ ನಮೂದಿಸಿದ ದರಗಳು ನಿರ್ಣಾಯಕವಾದವುಗಳು. ದರಗಳಲ್ಲಿ ರಿಯಾಯತಿ ಕೊಡುವುದಿದ್ದರೆ ಅಂಥವುಗಳನ್ನು ನಿಗದಿತ ನಮೂನೆ ಬಿ ಯ ಕೊನೆಯಲ್ಲಿ ಕೊಡಬೇಕು ಮತ್ತು ಅಂಥವುಗಳಿಗೆ ಗುತ್ತಿಗೆದಾರರ/ಸಂಸ್ಥೆಗಳ ಅಧಿಕೃತ ಸಹಿ ಮತ್ತು ಮೊಹರುಗಳು ಇರಬೇಕು ಅಥವಾ ಒಪ್ಪಂದಕ್ಕೆ ಅಧೀಕೃತವಾಗಿ ನಿಯೋಜಿಸಲ್ಪಟ್ಟವರ ಸಹಿ ಮತ್ತು ಮೊಹರುಗಳಿರಬೇಕು.

೨೨) ಮೇಲಿನ ಯಾವುದೇ ದಿನಗಳು ರಜೆ ದಿನಗಳಾದಲ್ಲಿ ಅದರ ಮುಂದಿನ ಕೆಲಸದ ದಿನವು ಸಿಂಧುವಾಗಿರುತ್ತದೆ.

೨೩) ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

( ಪಿ. ಸಿ. ಬೇವೂರ್)
ಕಾರ್ಯನಿರ್ವಾಹಕ ಅಭಿಯಂತರು [ಸಿ]
ರಸ್ತೆ ಮತ್ತು ಕಟ್ಟಡ ವಿಭಾಗ, ಕ. ವಿ .ನಿ. ನಿ.
ಅಂಬಿಕಾನಗರ – **581 363**

ಪ್ರತಿ : ಟೆಂಡರ್ ಬುಲೆಟಿನ್ ಆಫೀಸರ್, ಕಾರವಾರ ರವರ ದಯಾಪರ ಮಾಹಿತಿಗಾಗಿ
: ಸಿಸಿಇಕೆ / ಇಸಿಇಸಿ ರವರ ದಯಾಪರ ಮಾಹಿತಿಗಾಗಿ.
: ಸಿಕೆಎಸ್ / ಸಿಪಿಎಸ್ / ಸಿಆರ್‌ಎಸ್ /ಎಸ್‌ಇ[ಎನ್]/ ಡಿಜಿಎಂ(ಎಫ್) ಕೆ–1/ ಡಿಜಿಎಂ(ಎಫ್)ಜಿ
: ಎಲ್ಲಾ ಕಾರ್ಯನಿರ್ವಾಹಕ ಅಭಿಯಂತರು (ಸಿಸಿಇಕೆ ವಲಯ)/ ಎಜಿಎಂ[ಎಫ್] ಕೆ–2.
: ಇಇ[ಎಂ ಎಸ್ ಪಿ]ಎ/ಎಓ[ಐಎ]/ಎಇಇ[ಟಿಎ], ಗಣೇಶಗುಡಿ
: ಕೆನರಾ ಪಿ.ಡಬ್ಲ್ಯು.ಡಿ. ಕಂಟ್ರಾಕ್ಟರ್ಸ್ ಅಸೋಸಿಯೇಶನ್, ದಾಂಡೇಲಿ./ ನೋಟಿಸ್ ಬೋರ್ಡ.